**ದಿನಾಂಕಃ 25-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

4. ನಾವು ಕೋಲಾಪುರದಿಂದ ವಾಪಸ್ಸು ಬರಲು ಜೋಯಿಡಾ ತಲುಪಿದಾಗ ಕಾರವಾರ ಪೋಲಿಸ್ ಠಾಣೆಯ ಪೋಲಿಸರು ನಮ್ಮ ಜೊತೆಯಲ್ಲಿದ ಪೋಲಿಸರಿಗೆ ಫೋನ್ ಮಾಡಿ, ಪುನಃ ಖಾನಾಪುರಕ್ಕೆ ಹೋಗುವಂತೆ ತಿಳಿಸಿದರು. ಅದರಂತೆ ನಾವು ಆ ದಿನ ರಾತ್ರಿ 12.00 ಗಂಟೆಗೆ ಖಾನಾಪುರಕ್ಕೆ ತಲುಪಿ, ಅಲ್ಲಿನ ಪೋಲಿಸ್ ಠಾಣೆಗೆ ಹೋದೆವು. ನಂತರ ಖಾನಾಪುರ ಪೋಲಿಸರು ಚಾಸಾ-32 ರವರನ್ನು ಪೋಲಿಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆ ಮಾಡಿದಾಗ, ಆತ ಆ ಊರಿನಲ್ಲಿ ಗ್ಯಾರೇಜ್ ನಡೆಸುತ್ತಿರುವುದಾಗಿ ಹೇಳಿದನು ಮತ್ತು 2 ನೇ ಆರೋಪಿ ನನಗೆ ಪರಿಚಯ ಇರುತ್ತಾನೆ ಎಂದು ತಿಳಿಸಿದನು ಹಾಗೂ 2 ನೇ ಆರೋಪಿ ಒಂದು ಜೆನ್ ಕಾರನ್ನು ನನ್ನ ಗ್ಯಾರೇಜ್ ಗೆ ತಂದು ನಿಲ್ಲಿಸಿ, 2 ದಿನ ಬಿಟ್ಟು ಬರುವುದಾಗಿ ಹೇಳಿ ಹೋದನು. 2 ನೇ ಆರೋಪಿ ನಮ್ಮ ಗ್ಯಾರೇಜ್ ನಲ್ಲಿ ತಂದು ನಿಲ್ಲಿಸಿದ ಕಾರಿನ ಸಂಖ್ಯೆ MH-04/ BK- 0726 ಆಗಿತ್ತು. ಈ ಹಿಂದೆ ಒಂದನೇ ಆರೋಪಿ ಚಾಸಾ-32 ರವರ ಮೊಬೈಲ್ ಗೆ ಕರೆ ಮಾಡಿ ಮಾತನಾಡಿದ ಸಂಭಾಷಣೆ ಚಾಸಾ-32 ರವರ ಮೊಬೈಲ್ ನಲ್ಲಿ Auto record ಆಗಿ ಶೇಖರಣೆಗೊಂಡಿದ್ದು, ಅದನ್ನು ಚಾಸಾ-32 ಪೋಲಿಸ್ ಠಾಣೆಯಲ್ಲಿ ಅದನ್ನು ಎಲ್ಲರೂ ಕೇಳಿಸಿರುತ್ತಾನೆ. ಸದರಿ ಸಂಭಾಷಣೆಯಲ್ಲಿ 1 ನೇ ಆರೋಪಿ ಚಾಸಾ-32 ರವರಿಗೆ 2 ನೇ ಆರೋಪಿ ತಂದು ನಿಲ್ಲಿಸಿದ ಕಾರನ್ನು ಯಾರಿಗಾದರೂ ಮಾರಿಬಿಡು ಅಥವಾ ಯಾವುದಾದರೂ ಹೊಂಡದಲ್ಲಿ ಮುಚ್ಚಿ ಹಾಕು ಅಥವಾ ಗುಜರಿಗೆ ಹಾಕು ಎಂದು ಹೇಳಿರುತ್ತಾನೆ. ಆ ನಂತರ ಕಾರವಾರ ಪೋಲಿಸರು ನಮ್ಮ ಜೊತೆ ಇದ್ದ ಪೋಲಿಸರಿಗೆ ಕರೆ ಮಾಡಿ ಚಾಸಾ-32 ಹಾಗೂ 2 ನೇ ಆರೋಪಿ ತಂದು ನಿಲ್ಲಿಸಿದ ಕಾರನ್ನು ತೆಗೆದುಕೊಂಡು ಬರುವಂತೆ ತಿಳಿಸಿರುತ್ತಾರೆ ಹಾಗೂ ಬರುವಾಗ ದಾಂಡೇಲಿಗೆ ಬಂದು 2 ನೇ ಆರೋಪಿಯ ಅಕ್ಕ ಮತ್ತು ತಮ್ಮನನ್ನು ಕರೆದುಕೊಂಡು ಬರುವಂತೆ ತಿಳಿಸಿರುತ್ತಾರೆ. ಆ ದಿನ ರಾತ್ರಿ 2.00 ಗಂಟೆಯಾಗಿದ್ದರಿಂದ, ಮಾರನೇ ದಿನ ಅಂದರೆ ದಿನಾಂಕ 20.10.2018 ರಂದು ನಾವು ವಾಪಸ್ಸು ಕಾರವಾರಕ್ಕೆ ಬಂದಿರುತ್ತೇವೆ. ನಮ್ಮ ಹಿಂದುಗಡೆ ಚಾಸಾ-32 ತನ್ನ ಕಾರಿನಲ್ಲಿ ಕಾರವಾರಕ್ಕೆ ಬಂದಿರುತ್ತಾನೆ. ನಮ್ಮ ಜೊತೆ ಬಂದಿದ್ದ ಪೋಲಿಸರು 2 ನೆ ಆರೋಪಿಯ ಕಾರಿನಲ್ಲಿ ದಾಂಡೇಲಿಗೆ ಹೋಗಿ, ಅಲ್ಲಿ 2 ನೇ ಆರೋಪಿಯ ಅಕ್ಕ ಹಾಗೂ ತಮ್ಮನನ್ನು ಕರೆದುಕೊಂಡು ಕಾರವಾರಕ್ಕೆ ಬಂದಿರುತ್ತಾರೆ. ನಾವೆಲ್ಲರೂ ಕಾರವಾರಕ್ಕೆ ಬಂದ ನಂತರ ಪೋಲಿಸರು ಚಾಸಾ-32, 2 ನೇ ಆರೋಪಿಯ ಅಕ್ಕ ಹಾಗೂ ತಮ್ಮನನ್ನು

ವಿಚಾರಣೆ ಮಾಡುತ್ತಿದ್ದರು. ದಿನಾಂಕ 21.10.2018 ರಂದು ಮೃತ ಪ್ರೇಮಕುಮಾರನ ಮಾವ ಚಾಸಾ-1 ರವರು 1 ಮತ್ತು 2 ನೇ ಆರೋಪಿಗಳ ಮೇಲೆ ಕಾರವಾರ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿದರು. ಆ ನಂತರ ಪೋಲಿಸರು 2 ನೇ ಆರೋಪಿಯು ಕರೆ ಮಾಡಿದ ವಿವರಗಳನ್ನು ಪರಿಶೀಲಿಸಿದಾಗ ದಿನಾಂಕ 16.10.2018 ರಂದು 2 ನೇ ಆರೋಪಿಯು 3 ನೇ ಆರೋಪಿಗೆ ನಿರಂತರವಾಗಿ ಕರೆ ಮಾಡಿರುವುದು ಕಂಡು ಬಂದಿರುತ್ತದೆ. ಆಗ ಪೋಲಿಸರು 3 ನೇ ಆರೋಪಿ ಬಗ್ಗೆ ನಮ್ಮ ಬಳಿ ವಿಚಾರಿಸಿದ್ದು, ನಮಗೆ ಆತನ ಬಗ್ಗೆ ಗೊತ್ತಿರುವುದಿಲ್ಲ ಎಂದು ಹೇಳಿರುತ್ತೇವೆ. ನಂತರ ಪೋಲಿಸರು 2 ನೇ ಆರೋಪಿಯ ತಮ್ಮನಿಗೆ ವಿಚಾರಿಸಿದಾಗ ಆತ 3 ನೇ ಆರೋಪಿಯು ತನಗೆ ಅತ್ತಿಗೆ ಮಗನಾಗಬೇಕು ಎಂದು ಹೇಳಿರುತ್ತಾನೆ. ದಿನಾಂಕ 22.10.2018 ರಂದು ಪೋಲಿಸರು ನನಗೆ ಕಾರನ್ನು ತೆಗೆದುಕೊಂಡು ಬರಲು ಹೇಳಿದ್ದು, ಅದರಂತೆ ನಾನು ಬಾಡಿಗೆ ಕಾರನ್ನು ತೆಗೆದುಕೊಂಡು ಬಂದಿದ್ದು, ಸದರಿ ಕಾರಿನಲ್ಲಿ ಚಾಸಾ-20, ಪೋಲಿಸರು ಹಾಗೂ 2 ನೇ ಆರೋಪಿಯ ತಮ್ಮ ಉಳವಿಯ 3 ನೇ ಆರೋಪಿಯ ಹೆಂಡತಿಯ ಮನೆಗೆ ಹೋಗಿ, 3 ನೇ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ. ಅದೇ ದಿನ ಸಾಯಂಕಾಲ 2 ನೇ ಆರೋಪಿ ಠಾಣೆಯಲ್ಲಿ ಹಾಜರು ಆಗಿರುತ್ತಾನೆ.

5. ದಿನಾಂಕ 23.10.2018 ರಂದು ಕಾರವಾರ ಪೋಲಿಸರು ನಮ್ಮನ್ನು ಪೋಲಿಸ್ ಠಾಣೆಗೆ ಕರೆಸಿದರು. ಅದರಂತೆ ನಾನು, ಚಾಸಾ-1, ಚಾಸಾ-20 ಪೋಲಿಸ್ ಠಾಣೆಗೆ ಹೋದೆವು. ಅಲ್ಲಿ ಪೋಲಿಸರು ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಕರೆಸಿದ್ದರು. ಅಲ್ಲಿ ಪೋಲಿಸರು ನಮ್ಮನ್ನು ಮತ್ತು 3 ನೇ ಆರೋಪಿಯನ್ನು ಪಿ.ಎಸ್.ಐ ರವರ ಕೊಠಡಿಗೆ ಕರೆಸಿ, 3 ನೇ ಆರೋಪಿಯನ್ನು ವಿಚಾರಿಸಿದಾಗ ಆತ, ನಾನು ಹಾಗೂ 2 ನೇ ಆರೋಪಿ ಸೇರಿ ಉಳವಿಯ ಆಕಳಗವಿ ಅರಣ್ಯ ಪ್ರದೇಶದಲ್ಲಿ ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಿ ಬಿಸಾಕಿರುವುದಾಗಿ ಹೇಳಿರುತ್ತಾನೆ ಹಾಗೂ ಆ ವ್ಯಕ್ತಿಯು 2 ನೇ ಆರೋಪಿಗೆ ಪರಿಚಯದವನಾಗಿರುತ್ತಾನೆಂದು ಹೇಳಿರುತ್ತಾನೆ. ಆ ನಂತರ ಪೋಲಿಸರು 2 ನೇ ಆರೋಪಿಯನ್ನು ಪಿ.ಎಸ್.ಐ ರವರ ಕೊಠಡಿಗೆ ಕರೆದುಕೊಂಡು ಬಂದು ವಿಚಾರಿಸಿದಾಗ ಆತ, ನಾನು ಹಾಗೂ 3 ನೇ ಆರೋಪಿ ಸೇರಿ ಉಳವಿಯ ಆಕಳಗವಿ ಅರಣ್ಯ ಪ್ರದೇಶದಲ್ಲಿ ಪ್ರೇಮ ಕುಮಾರನನ್ನು ಕೊಲೆ ಮಾಡಿ ಬಿಸಾಕಿರುತ್ತೇವೆ ಎಂದು ಹೇಳಿರುತ್ತಾನೆ. ಆಗ ಪೋಲಿಸರು 2 ನೇ ಆರೋಪಿಯನ್ನು ಯಾಕೆ ಕೊಲೆ ಮಾಡಿದಿರಾ ಎಂದು ಕೇಳಿದಾಗ ಆತ 1 ನೇ ಆರೋಪಿ ನನ್ನ ಬಳಿ ಪ್ರೇಮಕಮಾರ ವ್ಯವಹಾರದಲ್ಲಿ ನನಗೆ ಬಹಳ

ತೊಂದರೆ ಕೊಡುತ್ತಿದ್ದಾನೆ, ನೀನು ಯಾರನ್ನಾದರೂ ಸಹಾಯ ತೆಗೆದುಕೊಂಡು ಪ್ರೇಮಕುಮಾರನನ್ನು ಕೊಲೆ ಮಾಡಿದರೆ ನಿನಗೆ ಕೆಲಸ ಕೊಡುತ್ತೇನೆ ಹಾಗೂ ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ 2 ಲಕ್ಷ ರೂಗಳನ್ನು ಜಮಾ ಮಾಡುತ್ತೇನೆ ಎಂದು ಹೇಳಿದ್ದ, ಆದ್ದರಿಂದ ನಾವು ಪ್ರೇಮಕುಮಾರನನ್ನು ಕೊಲೆ ಮಾಡಿರುತ್ತೇವೆ ಹಾಗೂ ನಮ್ಮೊಂದಿಗೆ ಬಂದರೆ ಕೊಲೆ ಮಾಡಿ ಬಿಸಾಡಿದ ಜಾಗವನ್ನು ತೋರಿಸುತ್ತೇವೆ ಎಂದು ಹೇಳಿರುತ್ತಾನೆ. ಆದ್ದರಿಂದ ಪೋಲಿಸರು 2 ಮತ್ತು 3 ನೇ ಆರೋಪಿಗಳನ್ನು, ನಮ್ಮನ್ನು ಹಾಗೂ ಪಂಚರನ್ನು ತಮ್ಮ ವ್ಯಾನ್ ನಲ್ಲಿ ಶವ ಬಿದ್ದ ಜಾಗಕ್ಕೆ ಜಾಗಕ್ಕೆ ಕರೆದುಕೊಂಡು ಹೋದರು. ಸ್ಥಳಕ್ಕೆ ಹೋಗುವಾಗ ನಮ್ಮ ವ್ಯಾನ್ ನ ಮುಂದುಗಡೆ ಎರಡು ಪೋಲಿಸ್ ಜೀಪುಗಳು, ಹಿಂದುಗಡೆ ಎರಡು ಪೋಲಿಸ್ ಜೀಪುಗಳು ಹಾಗೂ ಒಂದು ಖಾಸಗಿ ಆ್ಯಂಬುಲೆನ್ಸ ಇತ್ತು. 2 ಮತ್ತು 3 ನೇ ಆರೋಪಿಗಳು ಕೊಲೆ ಮಾಡಿದ ಸ್ಥಳಕ್ಕೆ ಹೋಗುವ ದಾರಿಯನ್ನು ತೋರಿಸುತ್ತಿದ್ದರು.

6. ನಾವು ಆಕಳಗವಿ ಚೆಕ್ ಪೋಸ್ಟ ತಲುಪಿದಾಗ 2 ನೇ ಮತ್ತು 3 ನೇ ಆರೋಪಿಗಳು ವಾಹನವನ್ನು ನಿಲ್ಲಿಸಲು ಹೇಳಿದ್ದು, ಅದರಂತೆ ನಾವೆಲ್ಲರೂ ಅಲ್ಲಿ ಇಳಿದು, ಕಾಲು ದಾರಿಯಲ್ಲಿ ಸುಮಾರು 1 ಕಿ.ಮೀ ನಡೆದು, ಅಲ್ಲಿಂದ ಎಡಕ್ಕೆ ತಿರುಗಿ 1 ½ ಕಿ.ಮೀ ಮುಂದೆ ನಡೆದು ಹೋದಾಗ, ಅಲ್ಲಿ ಇಳಿಜಾರಿನ ಪ್ರದೇಶದಲ್ಲಿ 2 ಮತ್ತು 3 ನೇ ಆರೋಪಿಗಳು ಕೊಲೆ ಮಾಡಿದ ಜಾಗವನ್ನು ಹಾಗೂ ಶವವನ್ನು ತೋರಿಸಿರುತ್ತಾರೆ. ಅಲ್ಲಿ ಒಂದು ಒಣಗಿದ ಮರ ಬಿದ್ದಿದ್ದು, ಅದರ ಪಕ್ಕದಲ್ಲಿ ಶವ ಬಿದ್ದಿರುತ್ತದೆ. ಶವದ ಮೇಲೆ ಒಂದು ನಿಕ್ಕರ್ ಬಟ್ಟೆ ಇರುತ್ತದೆ ಹಾಗೂ ಕೈಯಲ್ಲಿ ಕಪ್ಪು ದಾರ ಇರುತ್ತದೆ, ಪಕ್ಕದಲ್ಲಿ ಒಂದು ಬನಿಯನ್ ತುಂಡು ಹಾಗೂ ಒಂದು ಹಸಿರು ಬಣ್ಣದ ಬಟ್ಟೆ ಬಿದ್ದಿರುತ್ತದೆ. ಹಸಿರು ಬಣ್ಣದ ಬಟ್ಟೆಗೆ ರಕ್ತದ ಕಲೆಯಾಗಿರುತ್ತದೆ. 2-3 ದಿನಗಳಿಂದ ಮಳೆ ಬಿದ್ದಿದ್ದ ಕಾರಣ ಬಟ್ಟೆಗಳಿಗೆ ಮಣ್ಣು ಸಹ ತಾಗಿರುತ್ತದೆ. ಆ ಶವವನ್ನು ನಾನು ನೋಡಿದಾಗ ಅದು ನನ್ನ ತಮ್ಮನ ಶವವಾಗಿತ್ತು. ಅಲ್ಲಿ ಪೋಲಿಸರು ಸ್ಥಳ ಪಂಚನಾಮೆ ಮಾಡಿ, ಛಾಯಾಚಿತ್ರ ತೆಗೆದರು. ಆ ನಂತರ ಪೋಲಿಸರು ಶವ ಪಂಚನಾಮೆಯನ್ನು ಮಾಡಿದರು. ಶವ ಪಂಚನಾಮೆಯನ್ನು ಮಾಡುವಾಗ ನಾವು ಶವವನ್ನು ನೋಡಿದಾಗ ಶವದ ಮುಗು ಕತ್ತರಿಸಿದ್ದು ಮೂಳೆ ತುಂಡಾಗಿರುತ್ತದೆ, ಎಡಕಿವಿ ತುಂಡಾಗಿರುತ್ತದೆ, ಬಲ ಕೆನ್ನೆಯ ಮೇಲೆ ಕತ್ತರಿಸಿದ ಗಾಯಗಳು ಇದ್ದವು, ಎಡಕುತ್ತಿಗೆಯನ್ನು ಕತ್ತರಿಸಲಾಗಿದ್ದು, ಎಡಭುಜವನ್ನು ಕತ್ತರಿಸಿದ್ದು ಮೂಳೆ ಕಾಣುತ್ತಿತ್ತು, ಮೈಮೇಲೆ ಬಹಳಷ್ಟು ಕತ್ತರಿಸಿದ ಗಾಯಗಳು ಆಗಿದ್ದವು. ಅಲ್ಲಿ ಪೋಲಿಸರು ಶವ

ಪಂಚನಾಮೆಯನ್ನು ಮಾಡಿ, ಛಾಯಾಚಿತ್ರ ತೆಗೆದರು. ನಂತರ ಪೋಲಿಸರು ಆರೋಪಿಗಳನ್ನು ಯಾವ ಸ್ಥಳದಲ್ಲಿ ಕೊಲೆ ಮಾಡಿದ್ದಿರಾ ಎಂದು ಕೇಳಿದಾಗ ಆರೋಪಿಗಳು ಶವ ಬಿದ್ದ ಸ್ಥಳದಿಂದ 210 ಅಡಿ ದೂರದಲ್ಲಿ 2 ನೇ ಆರೋಪಿ ಹಾಗೂ ಮೃತ ಪ್ರೇಮಕುಮಾರನ ಕಣ್ಣಿಗೆ 3 ನೇ ಆರೋಪಿ ಬಟ್ಟೆ ಕಟ್ಟಿ, ಮುಂದೆ ಕರೆದುಕೊಂಡು ಹೋಗಿದ್ದು, ಶವ ಬಿದ್ದ ಸ್ಥಳದಿಂದ 150 ಅಡಿ ದೂರದಲ್ಲಿ 2 ನೇ ಆರೋಪಿ ತನ್ನ ಕಣ್ಣಿಗೆ ಕಟ್ಟಿದ ಬಟ್ಟೆಯನ್ನು ಬಿಚ್ಚಿಕೊಂಡು 2 ಮತ್ತು 3 ನೇ ಆರೋಪಿಗಳು ತಾವು ತಂದಿದ್ದ ಕತ್ತಿಗಳಿಂದ ಪ್ರೇಮಕುಮಾರನ ಮೇಲೆ ಹಲ್ಲೆ ಮಾಡಿದಾಗ ಪ್ರೇಮಕುಮಾರ ಇಳಿಜಾರಿನಲ್ಲಿ ಕೆಳಗೆ ಉರಳಿ ಬಿದ್ದಿದ್ದು, ಆ ನಂತರ ಅವರಿಬ್ಬರು ಪ್ರೇಮಕುಮಾರನ ಮೇಲೆ ಮತ್ತೆ ಹಲ್ಲೆ ಮಾಡಿ, ಕೊಲೆ ಮಾಡಿರುತ್ತೇವೆ ಎಂದು ಹೇಳಿದರು.

**ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ. ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ